(2) ಅರಕಲಗೂಡು ತಾಲ್ಲೂಕು ರಾಮನಾಥಪುರದಲ್ಲಿ ವಿದ್ಯುತ್ ಮೈನ್ ಲೈನ್ ತಂತಿಯು ಕಿತ್ತು ಬಿದ್ದು ಶ್ರೀ ಆರ್.ವಿ.ನಂದಕುಮಾರ್ ಅವರು ಅಪಘಾತಕ್ಕೀಡಾಗಿ ಮರಣ ಹೊಂದಿದ್ದು, ಅವರಿಗೆ ಇಲಾಖೆಯಿಂದ ಪರಿಹಾರ.

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು):- ಸನ್ಮಾನ್ಯ ಉಪಾಧ್ಯಕ್ಷರೆಯವರೆ, ಅರಕಲಗೂಡು ತಾಲ್ಲೂಕು ರಾಮನಾಥ ಪುರದಲ್ಲಿ ವಿದ್ಯುತ್‌ನ ಮೈನ್ ಲೈನಿನ ತಂತಿಯು ಕಿತ್ತು ಬಿದ್ದಿದ್ದ ಪ್ರಯುಕ್ತ ಅದೇ ಗ್ರಾಮದ ಆರ್.ಎಸ್.ವೆಂಕಟಾಚಲಯ್ಯಂಗಾರ್‌ರವರ ಮಗ ಶ್ರೀ ಆರ್.ವಿ.ನಂದಕುಮಾರ್ ತಾ: 10-10-91 ರಂದು ಅಪಘಾತಕ್ಕೆ ಈಡಾಗಿ ಮರಣ ಹೊಂದಿರುತ್ತಾರೆ. ಆದರೆ ಅವರಿಗೆ ಇಲಾಖೆಯ ವತಿಯಿಂದ ಪರಿಹಾರವನ್ನು ಇನ್ನೂ ಕೊಡದೇ ಇರುವುದರಿಂದ ಅವರ ತಂದೆತಾಯಿಗಳ ಜೀವನಕ್ಕೆ ತೊಂದರೆಯಾಗಿರುವುದನ್ನು ಮತ್ತು ತುರ್ತಾಗಿ ಪರಿಹಾರ ಕೊಡುವ ಬಗ್ಗೆ ಮಾನ್ಯ ವಿದ್ಯುತ್ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

(ಶ್ರೀ ಜಿ.ಎಸ್.ಶಿವನಂಜಪ್ಪನವರು ಅಧ್ಯಕ್ಷ ಪೀಠಕ್ಕೆ ಬಂದರು)

ಶ್ರೀ ಬಿ.ಶಿವಮೂರ್ತಿ:-ಸನ್ಮಾನ್ಯ ಉಪಾಧ್ಯಕ್ಷರೆಯವರೆ, ಈ ವಿಷಯವನ್ನು ಮಾನ್ಯ ಇಂಧನ ರಾಜ್ಯ ಮಂತ್ರಿಗಳ ಗಮನಕ್ಕೆ ತಂದು ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ.

(3) ಬೆಳಗಾಂ ಜಿಲ್ಲೆಯ ಶ್ರೀಕ್ಷೇತ್ರ ಸೊಗಲದಲ್ಲಿ ಕಟ್ಟಲಾದ ಪ್ರವಾಸಿ ಮಂದಿರಕ್ಕೆ ಪೀಠೋಪಕರಣವನ್ನು ಒದಗಿಸುವ ಬಗ್ಗೆ ಹಾಗೂ ಈ ಕಟ್ಟಡವನ್ನು ಸಂರಕ್ಷಣೆ ಮಾಡಲು ಜವಾನನ ನೇಮಕ.

ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ):- ಸನ್ಮಾನ್ಯ ಉಪಾಧ್ಯಕ್ಷರೆಯವರೆ, ಬೆಳಗಾಂ ಜಿಲ್ಲೆ ಸೌದತ್ತಿ ತಾಲೂಕು ಪೈಕಿ ಶ್ರೀ ಕ್ಷೇತ್ರ ಸೊಗಲದಲ್ಲಿ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಫಾಸ್ಟ್ ಫುಡ್ ಸೆಂಟರ್ ಹಾಗೂ ಪ್ರವಾಸಿಮಂದಿರ ಮತ್ತು ಡೈನಿಂಗ್ ಹಾಲ್ ಕಟ್ಟಲಾಗಿದೆ. ಲೋಕೋಪಯೋಗಿ ಇಲಾಖೆಯವರು ಈ ಕಟ್ಟಡಗಳನ್ನು ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರ ಮಾಡಿರುವರು. ಆದರೆ ಈ ಕಟ್ಟಡಗಳಿಗೆ ಇದುವರೆಗೂ ಪೀಠೋಪಕರಣಗಳನ್ನು ಒದಗಿಸದೇ ಇರುವುದರಿಂದ ಈ ಕಟ್ಟಡಗಳು ಉಪಯೋಗಕ್ಕೆ ಬಾರದಂತೆ ಆಗಿವೆ. ಹೀಗಾಗಿ ಈ ಕಟ್ಟಡಗಳ ಗ್ಲಾಸುಗಳೂ (ಕಿಟಕಿ ಗ್ಲಾಸ್‌ಗಳು) ಸಹ ಒಡೆದಿರುತ್ತವೆ. ಆದಕಾರಣ, ಈ ಕಟ್ಟಡಕ್ಕೆ ಪೀಠೋಪಕರಣ ಒದಗಿಸುವುದಾಗಬೇಕು ಮತ್ತು ಈ ಕಟ್ಟಡಗಳನ್ನು ನೋಡಿಕೊಳ್ಳಲು ಜವಾನನನ್ನು ಕೂಡಲೇ ನೇಮಿಸುವುದಾಗಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಪ್ರವಾಸೋದ್ಯಮ ಖಾತೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಶಿವಮೂರ್ತಿ:(ವಾರ್ತಾ ಮತ್ತು ಪ್ರವಾಸೋದ್ಯಮ ಖಾತೆ ರಾಜ್ಯ ಸಚಿವರು):- ಬೆಳಗಾಂ ಜಿಲ್ಲೆಯ ಶ್ರೀ ಕ್ಷೇತ್ರ ಸೋಗಲದಲ್ಲಿ ಪ್ರವಾಸೋದ್ಯಮ ಇಲಾಖೆಯು ರಾಜ್ಯ ಸರ್ಕಾರದ ಯೋಜನೆಯಡಿಯಲ್ಲಿ ಒಟ್ಟು ರೂ .12.47 ಲಕ್ಷ ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆಯ ಮೂಲಕ ಈ ಕೆಳಕಂಡ ಪ್ರವಾಸೀ ಸೌಲಭ್ಯಗಳನ್ನು ನಿರ್ಮಿಸಿದೆ.

1.	ಪ್ರವಾಸಿ ಗೃಹ ಮೊದಲನೇ ಹಂತ	ರೂ. 2.92 ಲಕ್ಷ
2.	ಪ್ರವಾಸಿ ಗೃಹ ಎರಡನೇ ಹಂತ	ರೂ. 2.92 ಲಕ್ಷ
3.	ಶೇಫ್ರು ಆಹಾರ ವಿತರಣಾ ಕೇಂದ್ರ	ರೂ. 2.87 ಲಕ್ಷ
4.	ಅಡುಗೆ ಮತ್ತು ಊಟದ ಸಭಾಂಗಣ	ರೂ. 3.00 ಲಕ್ಷ
5.	ಶೇಫ್ರು ಆಹಾರ ವಿತರಣಾ ಕೇಂದ್ರಕ್ಕೆ ಪಾದಚಾರಿ ರಸ್ತೆ ನಿರ್ಮಾಣಕ್ಕಾಗಿ.	ರೂ. 0.76 ಲಕ್ಷ
	ಒಟ್ಟು	ರೂ.12.47 ಲಕ್ಷ